# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 991 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ |
| ಉತ್ತರಿಸುವ ದಿನಾಂಕ | : | 23-02-2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೋವಿ ಸಮುದಾಯದ ಜನರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದೇ ಇರುವ ಬಗ್ಗೆ ವಿಶೇಷ ಸದನ ಸಮಿತಿಯ ವರದಿಯನ್ನು ದಿನಾಂಕ:28-10-2016 ರಂದು ಒಪ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಸರ್ಕಾರದ ಕ್ರಮದ ಕುರಿತು ವಿವರ ನೀಡುವುದು; | ಸದರಿ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ, ದಿನಾಂಕ:13.07.2017 ರಂದು ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸುತ್ತೋಲೆಯ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ) | ಸಮಿತಿಯು ಪರಿಗಣಿಸಿದ ಮುಖ್ಯ ಅಂಶಗಳು ಯಾವುವು ಅವುಗಳನ್ನು ಜಾರಿಗೆ ತರಲು ಸರ್ಕಾರ ಕೈಗೊಂಡ ಕ್ರಮವೇನು; | |
| ಇ) | ಭೋವಿ, ಬೋವಿ (ನಾನ್ ಬೆಸ್ತ) ಜಾತಿಗಳ ಆಚಾರ ವಿಚಾರ ಸಂಪ್ರದಾಯಗಳೆ ಬೇರೆ ಬಡ್, ವಡ್ಡ, ವಡ್ಡರ, ಒಡ್ಡರ, ಕಲ್ಲು ವಡ್ಡರ ಮಣ್ಣು ವಡ್ಡರ ಆಚಾರ ವಿಚಾರಗಳೇ ಬೇರೆ-ಬೇರೆ ಇದೆ. ಆದರೆ ಕಂದಾಯ ಇಲಾಖೆಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಭೋವಿ ಜನಾಂಗದವರಿಗೆ ಜಾತಿ ಪ್ರಮಾಣ ಪತ್ರ ನೀಡಲು ತಿರಸ್ಕರಿಸುತ್ತಿರುವ ಬಗ್ಗೆ ಸರ್ಕಾರದ ಕ್ರಮವೇನು? | ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ : 23 ರಲ್ಲಿ Bhovi, Od, Odde, Vaddar, Waddar, Voddar, Woddar, Bovi (Non–Bestha) Kalluvaddar, Mannuvaddar ಜಾತಿಗಳನ್ನು ಸೇರಿಸಲಾಗಿರುತ್ತದೆ. ಇದರನ್ವಯ ನೈಜ ಅರ್ಹ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನು ನಿಯಮಾನುಸಾರ ನೀಡಲಾಗುತ್ತಿದೆ. |
| ಈ) | ಹಿಂದುಳಿದ ಪ್ರವರ್ಗ-1ರ ಕ್ರಮಸಂಖ್ಯೆ 9(E) ಭೋವಿ ಜಾತಿಯನ್ನು ಹಿಂಪಡೆದು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬೋವಿ (ನಾನ್ ಬೆಸ್ತ) ಸೇರಿಸುವುದರಿಂದ ಪ್ರವರ್ಗ-1 ರಲ್ಲಿರುವುದನ್ನು ಕೈಬಿಡಲಾಗುವುದೇ? ನಾನ್ ಬೆಸ್ತ ಎಂಬ ಪದವನ್ನು ಎಲ್ಲಿಂದ ಪರಿಗಣಿಸಲಾಗಿದೆ? (ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ : SWD 225 BCA 2000 ದಿನಾಂಕ:30.03.2002ರ ಹಿಂದುಳಿದ ಪ್ರವರ್ಗ-1 ರಲ್ಲಿನ ಕ್ರಮ ಸಂಖ್ಯೆ : 93(e) ನಲ್ಲಿ Bovi ಜಾತಿಯನ್ನು ನಮೂದಿಸಲಾಗಿದೆ ಮತ್ತು ಸದರಿ ಜಾತಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ ಅದನ್ನು ಕೈಬಿಡಲು ಸಾಧ್ಯವಿಲ್ಲ. |

--2

